
# ದಿವ್ಯಸ್ಪರ್ಶದಿಂದ ಬೆಳಗಿದ ಬದುಕು

## (ಸ್ವಾಮಿ ವಿವೇಕಾನಂದರ ಸ್ನೇಹಿತ ಫ್ರಾನ್ಸಿಸ್ ಲೆಗೆಟ್‌ನ ಜೀವನ ಚರಿತ್ರೆ)




*ಕೃತಿ* : **ಸ್ವಾಮಿ ವಿವೇಕಾನಂದರ ವ್ಯಾಪಾರಿ ಗೆಳೆಯ**
**(ಸ್ವಾಮಿ ವಿವೇಕಾನಂದರ ಜೀವನದ ಒಂದು ಸುಪ್ತ ಅಧ್ಯಾಯ)**
*ಲೇಖಕರು* :
**ಸೋಮನಾಥ ಮುಖ್ಯೋಪಾಧ್ಯಾಯ**
*ಪ್ರಕಾಶಕರು* :
**ರಾಮಕೃಷ್ಣ ಸಾರದಾ ಮಿಷನ್**
**ದಕ್ಷಿಣೇಶ್ವರ, ಕೊಲ್ಕತ್ತಾ – 700076**
*ಪುಟಗಳು* : **200** *ಬೆಲೆ* : **25/**

ರಾಮಕೃಷ್ಣ ಶಾರದಾ ಮಿಷನ್ ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿಯ ಪ್ರಯುಕ್ತ ಪ್ರಕಟಿಸಿದ ವಿಶೇಷ ಪ್ರಕಟಣೆಯೇ **'ಸ್ವಾಮಿ ವಿವೇಕಾನಂದರ ವ್ಯಾಪಾರಿ ಗೆಳೆಯ'** ಗ್ರಂಥ. ಈ ಪುಸ್ತಕದ ಉಪಶೀರ್ಷಿಕೆ 'ಸ್ವಾಮಿ ವಿವೇಕಾನಂದರ ಜೀವನದ ಒಂದು ಸುಪ್ತ ಅಧ್ಯಾಯ' ಎಂದಿದೆ. ಅಮೆರಿಕದ ಪ್ರಭಾವಶಾಲಿ ವ್ಯಾಪಾರಿ ಫ್ರಾನ್ಸಿಸ್ ಲೆಗೆಟ್ ಅವರು ಸ್ವಾಮಿ ವಿವೇಕಾನಂದರ ಸಂಪರ್ಕಕ್ಕೆ ಬಂದ ಮೇಲೆ ಅವರ ಜೀವನದಲ್ಲೂ , ಅವರ ಕುಟುಂಬದ ಮೇಲೂ ಉಂಟಾದ ಬದಲಾವಣೆ, ಸ್ವಾಮೀಜಿ ತಮ್ಮ ಕಾರ್ಯಕ್ಕಾಗಿ ಲೆಗೆಟ್ ಹಾಗೂ ಅವರ ಸಂಬಂಧಿಕರಿಂದ ಪಡೆದ ಸಹಾಯ, ಮುಂದೆ ಈ ಕುಟುಂಬ ರಾಮಕೃಷ್ಣ ಮಿಷನ್ನಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಮುಂದುವರಿದ ಬಗೆ — ಈ ಸಂಗತಿಗಳನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸಲಾಗಿದೆ. ಮೂಲ ಬಂಗಾಳಿಯಲ್ಲಿ ಸೋಮನಾಥ ಮುಖ್ಯೋಪಾಧ್ಯಾಯ ಅವರು ಬರೆದ ಗ್ರಂಥ ವನ್ನು ಶಾರದಾ ಮಠದ ಮಾತಾಜಿಯವರು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ. ಹಲವು ಕುತೂಹಲಕಾರಿಯಾದ ಘಟನೆಗಳೊಂದಿಗೆ ಈ ಗ್ರಂಥವು ಫ್ರಾನ್ಸಿಸ್ ಲೆಗೆಟ್, ಬೆಟ್ಟಿ ಲೆಗೆಟ್, ಜೋಸೆಫಿನ್ ಮ್ಯಾಕ್‌ಲೌಡ್ ಇವರುಗಳ ವ್ಯಕ್ತಿತ್ವವನ್ನು ಚಿತ್ರಿಸುತ್ತ, ಸ್ವಾಮಿ ವಿವೇಕಾನಂದರ ದಿವ್ಯಸ್ಪರ್ಶದಿಂದ ಅವರ ಜೀವನ ಹೇಗೆ ಇನ್ನೊಂದು ದಿಕ್ಕಿಗೆ ಹರಿಯಿತು ಎಂಬುದನ್ನು ಅತ್ಯಂತ ರೋಚಕವಾಗಿ ವಿವರಿಸುತ್ತದೆ.

ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಗಳಲ್ಲಿ ಈ ವ್ಯಕ್ತಿತ್ವಗಳ ಉಲ್ಲೇಖ ಅಲ್ಲಲ್ಲಿ ಬರುತ್ತದೆ, ಪ್ರಾಸಂಗಿಕವಾಗಿ ನಡೆದ ಘಟನೆಗಳ ಒಂದು ಅಂಗವಾಗಿ ಅವರ ವಿಚಾರಗಳನ್ನು ಅಲ್ಲಿ ಹೇಳಲಾಗಿದೆ. ಆದರೆ ಅಲ್ಲೆಲ್ಲೂ ಈ ಕುಟುಂಬದ, ಈ ವ್ಯಕ್ತಿತ್ವಗಳ ಒಂದು ಪ್ರತ್ಯೇಕ ಚಿತ್ರಣವಿಲ್ಲ. ಸ್ವಾಮೀಜಿಯವರ ದೃಷ್ಟಿಕೋನದಿಂದ ಈ ವ್ಯಕ್ತಿಗಳನ್ನು ನೋಡುವ ಬದಲು, ಈ ಪಾಶ್ಚಾತ್ಯ ಸಜ್ಜನರ ದೃಷ್ಟಿಯಿಂದ ಸ್ವಾಮೀಜಿ ಹಾಗೂ ಭಾರತವನ್ನು ನೋಡುವ ವಿಶಿಷ್ಟ ನಿರೂಪಣಾಕ್ರಮ ಇಲ್ಲಿದೆ. ಹತ್ತು ಹಲವು ಆಕರಗಳಿಂದ ಸಂಗ್ರಹಿಸಿದ ಈ ಮಾಹಿತಿಗಳು ವಿವೇಕಾನಂದರ ಜೀವನ ಚಿತ್ರಣಕ್ಕೆ ಒಂದು ಹೊಸ ಶೋಭೆಯನ್ನು ನೀಡುತ್ತವೆ; ಅವರ ಜೀವನದ ಬಿರುಗಾಳಿಯಂಥ ಜೀವನಲೀಲೆಯಲ್ಲಿ ಎಂತೆಂತಹ ಪಾತ್ರಗಳು ಭಾಗವಹಿಸುತ್ತವೆ ಎಂಬುದನ್ನು ಸ್ಥೂಲವಾಗಿ ಚಿತ್ರಿಸುತ್ತವೆ. ಭಾರತೀಯ – ಪಾಶ್ಚಾತ್ಯ ಜೀವನ ಶೈಲಿ ಇನ್ನೂ ಪರಸ್ಪರ ಪರಿಚಯ ಮಾಡಿಕೊಳ್ಳದಿದ್ದ ಆ ಕಾಲದಲ್ಲಿ ಸ್ವಾಮಿ ವಿವೇಕಾನಂದರು ಅಮೆರಿಕದ ವ್ಯಾಪಾರಿಯೊಬ್ಬನ ಬದುಕಿನಲ್ಲಿ ಎಂತಹ ಪ್ರಭಾವವನ್ನು ಬೀರಿದರು ಎಂಬುದನ್ನು ಓದಿಯೇ ಅರಿತುಕೊಳ್ಳಬೇಕು. ಇಂತಹ ಒಂದು ಅಪೂರ್ವ ಕೃತಿಯನ್ನು ಸುಲಭ ಬೆಲೆಗೆ ಪ್ರಕಟಿಸಿದೆ ಶ್ರೀ ಶಾರದಾ ಮಿಷನ್.

ಈ ಕೃತಿಯ ನಿರೂಪಣೆಯನ್ನು ಕುರಿತು ಒಂದು ಮಾತು. ವ್ಯಕ್ತಿಗಳ ಪರಿಚಯ, ಘಟನೆಗಳ ವಿವರಣೆ, ಅವುಗಳಿಗೆ ಹಿನ್ನೆಲೆಯಾಗಿ ಆಗಿನ ಕಾಲದ ಹಿನ್ನೆಲೆ ಇವುಗಳನ್ನು ನೀಡುತ್ತ , ಅದಕ್ಕನುಗುಣವಾಗಿ ಕೃತಿಯ ಪ್ರಧಾನ ಪಾತ್ರವಾದ ಫ್ರಾನ್ಸಿಸ್ ಲೆಗೆಟ್ ವ್ಯಕ್ತಿತ್ವವನ್ನು ಓದುಗನ ಮುಂದೆ ಚಿತ್ರಿಸುವ ಶೈಲಿ ತುಂಬ ಸೊಗಸಾದದ್ದು. ಕಥನಶೈಲಿ ಎಲ್ಲೂ ಬೇಸರ ತರಿಸುವುದಿಲ್ಲ. ರಿಜಲಿ ಮ್ಯಾನರ್, ಸಹಸ್ರ ದ್ವೀಪೋದ್ಯಾನ ಮೊದಲಾದ ಸ್ಥಳಗಳ ವರ್ಣನೆಯು ಲೆಗೆಟ್ ಕುಟುಂಬ–ಸ್ವಾಮೀಜಿಯವರ ಒಡನಾಟದ ಚಿತ್ರವನ್ನು ಸಮರ್ಥವಾಗಿ ಕಣ್ಣಮುಂದೆ ತರುತ್ತದೆ. ನಡುನಡುವೆ ಹಾಸ್ಯಪೂರಿತವಾದ ಮಾತುಗಳು, ರಸವತ್ತಾದ ಘಟನೆಗಳು ಈ ಜೀವನಚಿತ್ರಕ್ಕೆ ಜೀವಂತಿಕೆ ನೀಡುತ್ತವೆ.